# ರಂಗೋಲಿ ಸ್ಥಳದಲ್ಲಿ ಮತ್ತೆ ಎಡತಾಕಿತು ಕರುಳಬಂಧ

‘ಒಳಗೆ ಬಾ. ಯಾರಾರೂ ನೋಡಿದ್ರೆ ಕುತ್ತಿಗೆಗೆ ಬರುತ್ತೆ...’ ಎನ್ನುತ್ತಾ ಮುಂಬಾಗಿಲು ಮುಚ್ಚಿ ಸೀತಾಲಕ್ಷ್ಮಿ ಮೈದುನನನ್ನು ಒಳಗೆ ಕರೆದೊಯ್ದಳು.

‘ಅತ್ತಿಗೆ, ನಾನು ಜಾಸ್ತಿ ಹೊತ್ತು ಇರಲ್ಲ. ನಾಳೆ ರಾತ್ರಿ ಹೋಮ, ನಾಡಿದ್ದು ಗೃಹಪ್ರವೇಶ ಇಟ್ಕಂಡಿದೀವಿ’

‘ಗೊತ್ತಾಯ್ತು’ ಅಂದಳು ಸೀತಾಲಕ್ಷ್ಮಿ.

‘ನಾನು ಬನ್ನಿ ಅಂತ ಕರೆದ್ರೂ ನೀವು ಬರೋಕಾಗಲ್ಲ ಅಂತ ನಂಗೊತ್ತು. ಇಲ್ಲಿಂದ್ಲೇ ಆಶೀರ್ವಾದ ಮಾಡಿ ಅಂತ ಕೇಳೋಕೆ ಬಂದಿದೀನಿ...’ ಬಗ್ಗಿ ಅತ್ತಿಗೆಯ ಕಾಲು ಹಿಡಿದ ವೆಂಕಟರಾಮು. ಅವನ ಕಣ್ಣಿಂದ ಜಾರಿದ ಹನಿಗಳು ಸೀತಾಲಕ್ಷ್ಮಿಯ ಪಾದಗಳಿಗೆ ಪ್ರೋಕ್ಷಣೆಯಾಗಿ ಅವಳನ್ನು ಮತ್ತೆ ಅಳುವಂತೆ ಮಾಡಿದುವು.

‘ನೀನು ನಂಗಿಂತಾ ದೊಡ್ಡೋನು. ಕಾಲಿಗೆ ಬೀಳ್ಬೇಡ...’ ಅಂದಳು ಸೀತಾಲಕ್ಷ್ಮಿ ಕಣ್ಣೊರೆಸಿಕೊಳ್ಳುತ್ತಾ.

‘ವಯಸ್ಸಿನಲ್ಲಿ ದೊಡ್ಡೋನಿರ್ಬೋದು. ಆದರೆ ಸಂಬಂಧದಲ್ಲಿ ನೀವೇ ದೊಡ್ಡೋರು. ಅತ್ತಿಗೆ ಅಂದ್ರೆ ತಾಯಿ ಸಮಾನ...’

‘ಆಯ್ತಪ್ಪಾ, ಒಳ್ಳೇದಾಗ್ಲಿ. ನನ್ನ ಆಶೀರ್ವಾದ ಯಾವತ್ತೂ ಇದ್ದೇ ಇರುತ್ತೆ...’

ಸೀತಾಲಕ್ಷ್ಮಿ ಹೆಪ್ಪು ಹಾಕಲು ಕಾಯ್ದಿರಿಸಿದ ಹಾಲಿಗೆ ದೊಡ್ಡ ಚಮಚ ಸಕ್ಕರೆ ಬೆರೆಸಿ ಕದಡಿಕೊಟ್ಟಳು. ಬೇಡ ಎಂದು ಅವನು ದಾಕ್ಷಿಣ್ಯಕ್ಕಾದರೂ ಹೇಳಲಿಲ್ಲ.

‘ನಿಮ್ಮ ಕೈಲಿ ಹಾಲು ಕುಡೀದೇ ಯಾವ ರಾಯನ ಕಾಲ ಆಯ್ತೋ...’ ಎನ್ನುತ್ತಾ ಹಾಲು ಗುಟುಕರಿಸಿದ.

‘ಯಾಕೋ ಹಿಂಗಾಗ್ಹೋಯ್ತು? ಒಬ್ಬರ ಮಕ ಒಬ್ರು ನೋಡಲ್ಲ ಅನ್ನೋ ದ್ವೇಷ ಯಾಕೆ ಶುರುವಾಯ್ತು?’

‘ನಂಗೊತ್ತಿಲ್ಲ ಅತ್ತಿಗೆ. ಅಣ್ಣನ್ನೇ ಕೇಳಿ...’

‘ಗೊತ್ತಿದೆ ನಂಗೆ. ಬಂಗಾರದ ವಿಷಯಕ್ಕೆ ಹತ್ಗಂಡಿದ್ದು ಅಲ್ವಾ?’

ವೆಂಕಟರಾಮು ಅರೆಗಳಿಗೆ ಮಾತಾಡಲಿಲ್ಲ. ಹಾಲು ಕುಡಿದ ಲೋಟವನ್ನು ಕೆಳಗಿಟ್ಟ ಮೇಲೆ ನಿಧಾನಕ್ಕೆ ಹೇಳಿದ,

‘ಅದೊಂದೇ ಅಲ್ಲ ಅತ್ಗೆ. ಜಮೀನು ಹಂಚಿಕೇಲೂ ಏನೇನೋ ಆಗಿದೆ. ಹೋಗ್ಲಿ ಬಿಡಿ, ಅವನೇನು ಹೊರಗಿನವನಾ? ನನ್ನ ಅಣ್ಣನೇ ಅಲ್ವಾ?’

ಗಂಡ ಹೇಳಿದ್ದಕ್ಕಿಂತ ಹೇಳದೆ ಉಳಿದದ್ದೂ ಬಹಳಷ್ಟು ಇರಬೇಕು ಎಂದು ಮೊದಲ ಬಾರಿಗೆ ಸೀತಾಲಕ್ಷ್ಮಿಗೆ ಮನವರಿಕೆಯಾಯ್ತು.

‘ಇದೇ ಹಗೇನ ಇಟ್ಗಂಡು ಸಾಧಿಸ್ಬಿರ್ಬೇಡಿ ಮಾರಾಯಾ. ಬಂದು, ಹೋಗಿ ಮಾಡ್ತಿರಿ. ನಂಗೆ ಎಷ್ಟೋ ಸಮಾಧಾನ ಆಗುತ್ತೆ...’

‘ಅಣ್ಣ ಮನೆ ಸೇರಿಸ್ತಾನಾ ಅತ್ಗೆ? ನಾನು ಹೇಳಿದ್ರೆ ನಮ್ಮನೇಲಿ ಕೇಳ್ಬಿಡ್ತಾರಾ? ಯಾರಿಗೂ ಹೇಳ್ದೆ ಕಳ್ಳನ ಥರ ಬಂದಿದೀನಿ. ಅಣ್ಣ ಊರಲ್ಲಿ ಇಲ್ಲಾಂತ ಗೊತ್ತಾಯ್ತು. ಮನಸ್ಸು ತಡೀಲಿಲ್ಲ ನಂಗೆ...’

‘ಏನು ಹೇಳ್ಲಿ ನಾನು? ಏನು ಹೇಳೋಕೆ ಹೋದ್ರೂ ಬಾಯಿ ಕಟ್ಟುತ್ತೆ. ಯಾಕೆ ಹಿಂಗೆಲ್ಲಾ ಆಯ್ತೋ? ಏನು ಗ್ರಾಚಾರಾನೋ?’

‘ಮಹಾಭಾರತದ ಕತೆ ಗೊತ್ತಲ್ಲ ಅತ್ಗೆ? ಕಾಲು ಜಾರಿ ಬಿದ್ದ ದುರ್ಯೋಧನನ್ನ ನೋಡಿ ದ್ರೌಪದಿ ನಕ್ಕಿದ್ದೊಂದು ಹೆಳೆ. ಮರ್ಯಾದೆಗೆ ಭಂಗ ಆಯ್ತೂಂದ್ರೆ ಮಹಾಭಾರತಕ್ಕೆ ಬೀಜ ಬಿದ್ದ ಹಾಗೆ...’

‘ಅಂದ್ರೆ? ಒಗಟೊಗಟಾಗಿ ಮಾತಾಡ್ಬೇಡ...’

‘ಸತ್ಯಕ್ಕಾರೂ ನಂಗೆ ಏನೂ ಗೊತ್ತಿಲ್ಲ ಅತ್ಗೆ.

